**07/1**

# 2010

## CRIMINOLOGY

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

**1.** (a) Quote the provisions of law under General Exceptions relating to privileged acts of judges when acting judicially and to acts done pursuant to the judgement or order of a court.

(b) Enumerate the advantages of OBSERVATION as a method in criminological researches.

(c) Explain the meanings of the words (i) Scorching, (ii) Blackening, (iii) Tattooing in fire-arm cases and briefly discuss their importance in crime detection.

(d) Explain the methods by which the casts of tool-marks are prepared by using the following materials :

(i) Plasticine

(ii) Dental mass

(iii) Latex and Plastic Solutions

(iv) Wood's metal

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ನ್ಯಾಯಿಕವಾಗಿ ಕಾರ್ಯ ಮಾಡುವಾಗ ಮತ್ತು ತೀರ್ಪಿನ ನಂತರ ಅಥವಾ ನ್ಯಾಯಾಲಯದ ಆದೇಶದ ನಂತರ ಕಾರ್ಯಗಳ ವಿಷಯದಲ್ಲಿ ನ್ಯಾಯಾಧೀಶರ ವಿಶಿಷ್ಟ ಹಕ್ಕುಗಳ ಬಗ್ಗೆ ಸಾಮಾನ್ಯ ಅಪವಾದಗಳ ಕೆಳಗೆ ಕೊಡಲಾದ ಕಾನೂನಿನ ಉಪಬಂಧಗಳನ್ನು ಉದ್ಧರಿಸಿ.

(ಬಿ) ಅಪರಾಧಶಾಸ್ತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳಲ್ಲಿ ಅವಲೋಕನವೂ ಕೂಡ ಒಂದು ವಿಧಾನವಾಗಿರುವುದರ ಅನುಕೂಲತೆಗಳನ್ನು ನಿರೂಪಿಸಿ.

(ಸಿ) ಸಿಡಿಮದ್ದಿನ ಅಸ್ತ್ರಗಳ ಪ್ರಕರಣದಲ್ಲಿ (i) ಸುಟ್ಟಿರುವುದು, (ii) ಕಪ್ಪಾಗಿರುವುದು, (iii) ಟ್ಯಾಟೂಯಿಂಗ್ ಪದಗಳ ಅರ್ಥವನ್ನು ವಿವರಿಸಿ ಮತ್ತು ಅಪರಾಧವನ್ನು ಪತ್ತೆ ಮಾಡುವುದಕ್ಕೆ ಇವುಗಳ ಪ್ರಾಮುಖ್ಯತೆ ಏನು ಎಂಬ ಬಗ್ಗೆ ಚರ್ಚಿಸಿ.

(ಡಿ) ಈ ಕೆಳಕಂಡ ಪದಾರ್ಥಗಳನ್ನು ಬಳಸಿಕೊಂಡು ಯಾವ ರೀತಿ ಹತಾರ-ಗುರುತುಗಳ ಅಚ್ಚುಗಳನ್ನು ಸಿದ್ಧಪಡಿಸಲಾಗುತ್ತದೆ ಎಂಬುದನ್ನು ವಿವರಿಸಿ :

(i) ಪ್ಲಾಸ್ಟಿಸೀನ್

(ii) ಡೆಂಟಲ್ ಮಾಸ್

(iii) ಲೇಟೆಕ್ಸ್ ಮತ್ತು ಪ್ಲಾಸ್ಟಿಕ್ ದ್ರಾವಣಗಳು

(iv) ವುಡ್ಸ್ ಮೆಟಲ್

[Turn over

## PART B

*10×10=100*

*Answer each question in about 100 words. Each question carries 10 marks.*

2. What is the explanation of psychoanalytic school about the causes of crime and criminal behaviour ?

3. Explain the principles of (i) comparison, (ii) analysis and bring out the law of probability in Forensic Science examinations. Give examples.

4. Explain with the help of drawings :

   (a) Bifurcation

   (b) Island

   (c) Crossover

   (d) Hook

   (e) Divergence

   in Dactylography.

5. How did Hans Von Hentig classify the victims by applying psychological, sociological and biological factors ?

6. What are the underlying assumptions in case-study methods ? What are the special areas which are studied when marital history of a convict is prepared ?

7. What is 'Counterfeit' as given under Section 28 of the Indian Penal Code-1860 ? How is a counterfeit coin detected ?

8. Explain the use of graphite powder to detect mechanical erasures and U.V. light examination to detect chemical erasures on paper.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಅಪರಾಧ ಮತ್ತು ಅಪರಾಧಿಕ ವರ್ತನೆಗೆ ಸಂಬಂಧಿಸಿದಂತೆ ಮನೋ ವಿಶ್ಲೇಷಣಾತ್ಮಕ ಪ್ರಸ್ಥಾನವು ನೀಡುವ ವಿವರಣೆ ಏನು ?

**3.** (i) ಹೋಲಿಕೆ ಮತ್ತು (ii) ವಿಶ್ಲೇಷಣೆಯ ತತ್ವಗಳನ್ನು ವಿವರಿಸಿ ಮತ್ತು ವಿಧಿವಿಜ್ಞಾನ ಪರೀಕ್ಷಣೆಗಳಲ್ಲಿ ಸಂಭಾವ್ಯತೆಯ ನಿಯಮವನ್ನು ಕುರಿತಂತೆ ಉದಾಹರಣೆಗಳೊಂದಿಗೆ ವಿಶದಪಡಿಸಿ.

**4.** ರೇಖಾಚಿತ್ರಗಳ ನೆರವಿನೊಂದಿಗೆ ಬೆರಳು ಮುದ್ರೆಶಾಸ್ತ್ರದ ಈ ಕೆಳಗಿನವುಗಳನ್ನು ವಿವರಿಸಿ :

(ಎ) ಕವಲೊಡೆದಿರುವಿಕೆ

(ಬಿ) ದ್ವೀಪ (ನಡುಗಡ್ಡೆ)

(ಸಿ) ಒಂದರಮೇಲೊಂದು ವ್ಯಾಪಿಸು

(ಡಿ) HOOK

(ಇ) ದಿಕ್‌ಚ್ಯುತಿ

**5.** ಹ್ಯಾನ್ಸ್ ವಾನ್ ಹೆಂಟಿಗ್ ಅವರು ಮನೋಶಾಸ್ತ್ರೀಯ ಸಮಾಜಶಾಸ್ತ್ರೀಯ ಮತ್ತು ಜೀವಶಾಸ್ತ್ರೀಯ ಅಂಶಗಳನ್ನು ಅನ್ವಯಿಸುವ ಮೂಲಕ ಸಂತ್ರಸ್ತರನ್ನು (victims) ಯಾವ ರೀತಿ ವರ್ಗೀಕರಿಸಿದ್ದಾರೆ ?

**6.** ಘಟನಾ ಅಧ್ಯಯನ ವಿಧಾನದಲ್ಲಿರುವ ಮೂಲ ಗ್ರಹಿಕೆಗಳೇನು ? ಅಪರಾಧ ನಿರ್ಣೀತವಾದ ವ್ಯಕ್ತಿಯ ವೈವಾಹಿಕ ಚರಿತ್ರೆಯನ್ನು ಸಿದ್ಧಪಡಿಸುವಾಗ ಯಾವ ವಿಶೇಷ ಕ್ಷೇತ್ರಗಳನ್ನು ಅಧ್ಯಯನಿಸಲಾಗುತ್ತದೆ ?

**7.** ಭಾರತದ ದಂಡ ಸಂಹಿತೆ 1860 ರ 28 ನೇ ಪರಿಚ್ಛೇದ ಪ್ರಕಾರ 'ಖೋಟಾ' ಎಂದರೇನು ? ಖೋಟಾನಾಣ್ಯವನ್ನು ಹೇಗೆ ಪತ್ತೆ ಮಾಡಲಾಗುವುದು ?

**8.** ಕಾಗದದ ಮೇಲೆ, ಯಾಂತ್ರಿಕವಾಗಿ (mechanical) ಅಳಿಸಿರುವುದನ್ನು ಪತ್ತೆಮಾಡಲು ಗ್ರಾಫೈಟ್ ಪುಡಿಯ ಬಳಕೆ ಮತ್ತು ರಾಸಾಯನಿಕವಾಗಿ ಅಳಿಸಿರುವುದನ್ನು ಪತ್ತೆ ಮಾಡಲು U.V. ಬೆಳಕಿನ ಬಳಕೆಗಳ ಉಪಯೋಗವನ್ನು ವಿವರಿಸಿ.

**9.** What is the provision of law under the Code of Criminal Procedure 1973 regarding the imposition of sentence in cases of conviction of several offences at one trial ?

**10.** What is Medullary Index ? Discuss its importance in Forensic Science and bring out the features of Medulla in human head hairs.

**11.** What are the factors which may interfere with blood grouping ?

9. ಅನೇಕ ಅಪರಾಧಗಳ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದಂತೆ ಒಂದೇ ವಿಚಾರಣೆಯಲ್ಲಿ ಶಿಕ್ಷೆಯ ಆದೇಶವನ್ನು ವಿಧಿಸುವ ಬಗ್ಗೆ 1973ರ ಅಪರಾಧ ಪ್ರಕ್ರಿಯಾ ಸಂಹಿತೆಯ ಕೆಳಗೆ ಯಾವ ಕಾನೂನು ಅವಕಾಶಗಳನ್ನು ಒದಗಿಸಲಾಗಿದೆ ?

10. ಮೆಡುಲರಿ ಇಂಡೆಕ್ಸ್ ಎಂದರೇನು ? ವಿಧಿವಿಜ್ಞಾನದಲ್ಲಿ ಇದರ ಪ್ರಾಮುಖ್ಯತೆ ಕುರಿತು ಚರ್ಚಿಸಿ ಮತ್ತು ಮಾನವನ ತಲೆಗೂದಲಿನ ಮೆಡುಲಾದ ಲಕ್ಷಣಗಳನ್ನು ತಿಳಿಸಿ.

11. ರಕ್ತದ ಗುಂಪನ್ನು ನಿರ್ಣಯಿಸುವಲ್ಲಿ ತೊಡಕುಂಟು ಮಾಡಬಹುದಾದ ಸಂಗತಿಗಳು ಯಾವುವು ?

[Turn over

## PART C

*6×15=90*

*Answer each question in about 150 words. Each question carries 15 marks.*

**12.** Critically examine the demonological theory of crime causation and bring out the major contributions of Cesare Lombroso (Italy, 1835-1909) about the cause of crime.

**13.** What is (i) Rigor Mortis, (ii) Lividity, (iii) Cadaveric Lividity in Forensic Medicine ? Explain how (a) Adipocere and (b) Mummification take place.

**14.** What is a 'Confession' under Indian Evidence Act 1872 ? What are the provisions of law under the Act which bring out the confessions before police ? Give examples.

**15.** When is a culpable homicide treated as 'not murder' under the Indian Penal Code 1860 ? Give illustrations and examples.

**16.** (a) Critically examine the 'laws of imitation' given by Gabriel Tarde (1843 – 1904) to understand crime and criminal behaviour.

(b) Explain cultural lag theory about crime and crime-causation.

**17.** (a) What are the items of evidence usually collected from a scene of crime in poisoning cases ?

(b) What are the unavoidable autopsy materials and their quantity collected for detection of poisons during toxicological examination ?

(c) What other autopsy materials may help to detect poisons and how much quantity of each item should be collected for toxicological examination ? Explain how they are useful.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಅಪರಾಧ ನಡೆಯಲು ಕಾರಣವಾಗುವ ಅಂಶಗಳ ಬಗ್ಗೆ ಭೂತವಿದ್ಯೆಯ ಸಿದ್ಧಾಂತ ಏನು ಹೇಳುತ್ತದೆ ಎಂಬುದನ್ನು ವಿಮರ್ಶಾತ್ಮಕವಾಗಿ ಬರೆಯಿರಿ ಮತ್ತು ಅಪರಾಧದ ಕಾರಣಗಳನ್ನು ಕುರಿತಂತೆ ಸೀಸರ್ ಲೊಂಬ್ರೊಸೊ (ಇಟಲಿ, 1835-1909) ನೀಡಿರುವ ಪ್ರಮುಖ ಕೊಡುಗೆಗಳನ್ನು ನಿರೂಪಿಸಿ.

**13.** ವಿಧಿವಿಜ್ಞಾನದ ವೈದ್ಯಕೀಯ ಪರಿಭಾಷೆಯಲ್ಲಿ (i) ಶವದ ಸೆಡೆತ (ii) ನೀಲಿಗಟ್ಟುವಿಕೆ (iii) ಶವದ ನೀಲಿಗಟ್ಟುವಿಕೆ ಎಂದರೇನು ? (ಎ) Adipocere ಮತ್ತು (ಬಿ) ಅಂಗಾಂಶ ಬತ್ತಿ ಹೋಗುವಿಕೆ (ಮಮ್ಮೀಕರಣ) ಹೇಗೆ ನಡೆಯುತ್ತದೆ ಎಂಬುದನ್ನು ವಿವರಿಸಿ.

**14.** ಭಾರತೀಯ ಸಾಕ್ಷ್ಯ ಅಧಿನಿಯಮ 1872, ಪ್ರಕಾರ 'ತಪ್ಪೊಪ್ಪಿಗೆ' ಎಂದರೇನು ? ಪೋಲಿಸರ ಮುಂದೆ ತಪ್ಪೊಪ್ಪಿಗೆಯನ್ನು ಕೊಡಲು ಈ ಅಧಿನಿಯಮದ ಕೆಳಗೆ ಯಾವ ಕಾನೂನಿನ ಅವಕಾಶಗಳನ್ನು ಒದಗಿಸಲಾಗಿದೆ ? ಉದಾಹರಣೆಗಳನ್ನು ಕೊಡಿ.

**15.** ಯಾವಾಗ ಒಂದು ಅಪರಾಧಿಕ ನರಹತ್ಯೆಯನ್ನು ಭಾರತೀಯ ದಂಡಸಂಹಿತೆ 1860 ರ ಅಡಿಯಲ್ಲಿ 'ಕೊಲೆಯಲ್ಲ' ಎಂದು ಪರಿಗಣಿಸಲಾಗುತ್ತದೆ ? ಇದಕ್ಕೆ ದೃಷ್ಟಾಂತಗಳನ್ನೂ ಉದಾಹರಣೆಗಳನ್ನೂ ಕೊಟ್ಟುವಿವರಿಸಿ.

**16.** (ಎ) ಅಪರಾಧ ಮತ್ತು ಅಪರಾಧಿಕ ವರ್ತನೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಗೇಬ್ರಿಯಲ್ ಟ್ರೇಡ್ (1843 – 1904) ನೀಡಿರುವ 'ಅನುಕರಣೆಯ ನಿಯಮ' ಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

(ಬಿ) ಅಪರಾಧ ಮತ್ತು ಅಪರಾಧದ ಕಾರಣಗಳನ್ನು ಕುರಿತಾದ ಸಾಂಸ್ಕೃತಿಕ ಹಿಂಬೀಳಿಕೆ ಸಿದ್ಧಾಂತವನ್ನು ವಿವರಿಸಿ.

**17.** (ಎ) ವಿಷಪ್ರಾಶನದ ಪ್ರಕರಣಗಳಲ್ಲಿ ಅಪರಾಧನಡೆದ ಸ್ಥಳದಿಂದ ಸಾಮಾನ್ಯವಾಗಿ ಸಂಗ್ರಹಿಸುವ ಸಾಕ್ಷ್ಯವಸ್ತುಗಳು ಯಾವುವು ?

(ಬಿ) ವಿಷವಿಜ್ಞಾನ ಸಂಬಂಧದ ಪರೀಕ್ಷೆಗಳಲ್ಲಿ ವಿಷಗಳನ್ನು ಪತ್ತೆ ಮಾಡುವುದಕ್ಕಾಗಿ ಸಂಗ್ರಹಿಸಲೇ ಬೇಕಾದ ಅಟಾಪ್ಸಿಪದಾರ್ಥಗಳು ಯಾವುವು ಮತ್ತು ಅವುಗಳನ್ನು ಎಷ್ಟು ಪ್ರಮಾಣದಲ್ಲಿ ಸಂಗ್ರಹಿಸಬೇಕು ?

(ಸಿ) ವಿಷಗಳನ್ನು ಪತ್ತೆ ಮಾಡುವುದಕ್ಕಾಗಿ ಸಹಾಯಕವಾಗಬಹುದಾದ ಇನ್ನಿತರ ಅಟಾಪ್ಸಿ ಪದಾರ್ಥಗಳು ಯಾವುವು ಮತ್ತು ವಿಷವಿಜ್ಞಾನ ಪರೀಕ್ಷೆಗಾಗಿ ಈ ಪ್ರತಿಯೊಂದನ್ನು ಎಷ್ಟು ಪ್ರಮಾಣದಲ್ಲಿ ಸಂಗ್ರಹಿಸಬೇಕು. ಇವು ಹೇಗೆ ಉಪಯುಕ್ತ ಎಂಬುದನ್ನು ವಿವರಿಸಿ.

## PART D

3×30=90

*Answer any* ***three*** *of the following questions, each in about 300 words. Each question carries 30 marks.*

**18.** How can a forensic expert determine the dimensions and age of wounds ?

**19.** Distinguish between white collar and blue collar (i.e., conventional crimes) crimes. Bring out the special elements noticed in white collar crimes.

**20.** Discuss the provisions of law under the Code of Criminal Procedure 1973 empowering the police to conduct a search without warrant.

**21.** (a) How is the individuality of Gait Pattern established ?

(b) What are the features which make finger-prints the most reliable and important piece of evidence ?

(c) How are the finger-prints from dead bodies taken ?

**22.** Briefly examine the social structure theories of crime causation and critically evaluate their importance in the present day society.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ವಿಧಿವಿಜ್ಞಾನ ಪರಿಣತರು ಗಾಯಗಳ ಗಾತ್ರ ಮತ್ತು ಅವು ಯಾವಾಗ ಆಗಿದ್ದು ಎಂಬುದನ್ನು ಹೇಗೆ ನಿರ್ಣಯಿಸುತ್ತಾರೆ ?

**19.** ದೊಡ್ಡವರ ಅಪರಾಧಗಳು ಮತ್ತು ಸಾಮಾನ್ಯರ ಅಪರಾಧಗಳ (ಅಂದರೆ ಸಾಂಪ್ರದಾಯಿಕ ಅಪರಾಧಗಳು) ನಡುವೆ ಇರುವ ವ್ಯತ್ಯಾಸಗಳನ್ನು ತಿಳಿಸಿ. ದೊಡ್ಡವರ ಅಪರಾಧಗಳಲ್ಲಿ ಕಂಡು ಬರುವ ವಿಶೇಷ ಅಂಶಗಳನ್ನು ನಿರೂಪಿಸಿ.

**20.** ವಾರಂಟ್ ಇಲ್ಲದೆ ಶೋಧನೆ ನಡೆಸುವುದಕ್ಕೆ ಪೋಲೀಸರಿಗೆ ಅಧಿಕಾರ ನೀಡುವ ಬಗ್ಗೆ, ದಂಡಪ್ರಕ್ರಿಯಾ ಸಂಹಿತೆ 1973 ರ ಅಡಿಯಲ್ಲಿರುವ ಕಾನೂನಿನ ಅವಕಾಶಗಳನ್ನು ಕುರಿತು ಚರ್ಚಿಸಿ.

**21.** (ಎ) ನಡಿಗೆ ಭಂಗಿಯ ವೈಶಿಷ್ಟ್ಯವನ್ನು ಹೇಗೆ ನಿರ್ಧರಿಸಲಾಗುತ್ತದೆ ?

(ಬಿ) ಯಾವ ವಿಶಿಷ್ಟ ಲಕ್ಷಣಗಳಿಂದಾಗಿ ಬೆರಳಚ್ಚು ಮುದ್ರೆಗಳು ಅತ್ಯಂತ ವಿಶ್ವಸನೀಯವಾದ ಮತ್ತು ಅತಿಮುಖ್ಯವಾದ ಸಾಕ್ಷ್ಯಾಧಾರಗಳಾಗಿವೆ ?

(ಸಿ) ಮೃತ ದೇಹಗಳಿಂದ ಬೆರಳಚ್ಚು ಮುದ್ರೆಗಳನ್ನು ಹೇಗೆ ಪಡೆಯಲಾಗುತ್ತದೆ ?

**22.** ಅಪರಾಧ ಉಂಟುಮಾಡುವ ಸಂಗತಿಗಳನ್ನು ಕುರಿತಂತೆ ಪ್ರತಿಪಾದಿಸಲಾಗಿರುವ ಸಾಮಾಜಿಕ ರಚನಾ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿ. ಇಂದಿನ ಸಮಾಜದ ಹಿನ್ನೆಲೆಯಲ್ಲಿ ಈ ಸಿದ್ಧಾಂತಗಳ ಪ್ರಾಮುಖ್ಯತೆ ಕುರಿತು ವಿಮರ್ಶಾತ್ಮಕವಾಗಿ ವಿವೇಚಿಸಿ.

# 2010

# ಅಪರಾಧಶಾಸ್ತ್ರ

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

---

**ಸೂಚನೆಗಳು**

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

---

***Note :*** *The English version of the instructions is printed on the front cover of this question paper.*

SEAL

07/2

# 2010

## CRIMINOLOGY

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory.***
*Answer any* ***three*** *questions in Part D.*

SEAL

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

1. (a) What is a broken home ? Bring out the etiological importance of broken home in the causation of crime and delinquency.

   (b) What is the meaning of saying

   (i) the mass media serves as a predisposing agent;

   (ii) the mass media serves as a precipitating agent in crime causation ? Explain.

   (c) What are the precautions to be taken while collecting hair for forensic examination ?

   (d) What is 'Trafficking' in sex-literature ? Who are the persons subjected to 'Trafficking' and how ?

**ಭಾಗ A** *4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಒಡೆದ ಮನೆ ಎಂದರೇನು ? ಅಪರಾಧ ಮತ್ತು ಅಕೃತ್ಯಗಳು ಉಂಟಾಗುವುದಕ್ಕೆ ಒಡೆದ ಮನೆ ಎಷ್ಟರ ಮಟ್ಟಿಗೆ ಮೂಲ ಕಾರಣವಾಗಿರುತ್ತದೆ ಎಂಬುದನ್ನು ನಿರೂಪಿಸಿ.

(ಬಿ) ಅಪರಾಧಗಳು ಉಂಟಾಗುವುದಕ್ಕೆ

(i) ಸಮೂಹ ಮಾಧ್ಯಮವು ಪ್ರೇರೇಪಿಸುವ ಅಂಶವಾಗಿ ಕೆಲಸ ಮಾಡುತ್ತದೆ,

(ii) ಸಮೂಹ ಮಾಧ್ಯಮವು ಅದರತ್ತ ದುಡುಕಿ ಮುನ್ನುಗ್ಗುವಂತೆ ಮಾಡುತ್ತದೆ – ಇದನ್ನು ವಿವರಿಸಿ.

(ಸಿ) ವಿಧಿವಿಜ್ಞಾನ ಪರೀಕ್ಷೆಗಾಗಿ ಕೂದಲನ್ನು ಸಂಗ್ರಹಿಸುವಾಗ ಯಾವ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳಬೇಕು ?

(ಡಿ) ಲೈಂಗಿಕ ಸಾಹಿತ್ಯ ಭಾಷೆಯಲ್ಲಿ "ಮಾನವ ಸಾಗಣೆ" ಎಂದರೇನು ? ಈ 'ಸಾಗಾಣಿಕೆಗೆ' ಗುರಿಯಾಗುವ ವ್ಯಕ್ತಿಗಳು ಯಾರು ಮತ್ತು ಹೇಗೆ ?

## PART B

*10×10=100*

*Answer each question in about 100 words. Each question carries 10 marks.*

**2.** Critically evaluate the retributive theory of criminal justice bringing out the demerits in the current world of correction.

**3.** Enumerate the advantages of Digital Photography of the scene of crime.

**4.** What do Continuation Signals, Distancing, Emotional Insulation and Homeostasis' mean in professional police-witness interviewing ?

**5.** What are the different types of scenes of crimes ? How are they inspected ?

**6.** How are (i) Burnt/partly burnt documents, (ii) Fragile documents, (iii) Damaged or torn documents handled for collection as an evidence ?

**7.** How are the bullets from dead bodies extracted ?

**8.** 'Mutilation, Branding' they were two forms of punishment in the history of Penology. Comment.

**9.** Realizing the defects and demerits in the Juvenile Justice Act, 1986, a new Act called Juvenile Justice (Care and Protection of Children) Act, 2000 was enacted in India. Bring out the objectives of the new Act and the provisions of law regarding the age of the juvenile in the old and the new Acts.

**10.** What is meant by "eligibility and suitability" of inmates in correctional institutions for granting parole to them ?

**11.** Discuss the importance of 'Self-Disclosing' during a client centered correction (therapy) of an inmate in a correctional institution.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಅಪರಾಧ ನ್ಯಾಯದ ಮುಯ್ಯಿಗೆ ಮುಯ್ಯಿ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ವಿವರಿಸಿ, ಜೊತೆಗೆ ಪ್ರಸ್ತುತ ಜಗತ್ತಿನ ತಿದ್ದುಪಡಿ ಕ್ರಮದ ದೋಷಗಳೇನು ಎಂಬುದನ್ನು ತಿಳಿಸಿ.

**3.** ಅಪರಾಧ ನಡೆದ ಸ್ಥಳದ ಡಿಜಿಟಲ್ ಛಾಯಾಚಿತ್ರಗ್ರಹಣ ಮಾಡುವುದರಲ್ಲಿನ ಅನುಕೂಲತೆಗಳೇನು ?

**4.** ವೃತ್ತಿಪರ ಪೊಲೀಸರಿಂದ ಸಾಕ್ಷಿಗಳೊಂದಿಗೆ ನಡೆಯುವ ಮುಖಾಮುಖಿ ಸಂದರ್ಶನಕ್ಕೆ ಸಂಬಂಧಿಸಿದಂತೆ ಮುಂದುವರಿಕೆ ಸಂಕೇತಗಳು ದೂರವಾಗುವಿಕೆ, ಭಾವೋದ್ರೇಕಗಳನ್ನು ತೋರಿಸಿಕೊಳ್ಳದಿರುವುದು, ಮತ್ತು ಸಮತೋಲನ ಎಂಬುವುಗಳ ಅರ್ಥವೇನು ?

**5.** ಅಪರಾಧದ ವಿವಿಧ ಬಗೆಯ ಸ್ಥಳಗಳು ಯಾವುವು ? ಅವುಗಳನ್ನು ಹೇಗೆ ತನಿಖೆ ಮಾಡಲಾಗುತ್ತದೆ ?

**6.** ಸಾಕ್ಷ್ಯಾಧಾರಗಳಾಗಿ (i) ಸುಟ್ಟುಹೋದ/ಭಾಗಶ: ಸುಟ್ಟುಹೋದ ದಸ್ತಾವೇಜುಗಳು (ii) ನಾಜೂಕಾದ ಸಾಕ್ಷ್ಯ ವಸ್ತುಗಳು (iii) ಜಖಂ ಆದ ಅಥವಾ ಹರಿದು ಹೋದ ಸಾಕ್ಷ್ಯ ವಸ್ತು ಪತ್ರಗಳ ಸಂಗ್ರಹಣೆಯನ್ನು ಹೇಗೆ ನಿಭಾಯಿಸಬೇಕು ?

**7.** ಮೃತದೇಹಗಳಿಂದ ಗುಂಡುಗಳನ್ನು ಹೇಗೆ ಹೊರತೆಗೆಯಲಾಗುತ್ತದೆ ?

**8.** ದಂಡನಾಶಾಸ್ತ್ರದ ಇತಿಹಾಸದಲ್ಲಿ 'ಅಂಗಹೀನಮಾಡಿ ವಿರೂಪಗೊಳಿಸುವುದು ಮತ್ತು ಮುದ್ರೆ ಒತ್ತುವುದು' ಇವು ಎರಡು ವಿಧದ ಶಿಕ್ಷೆಗಳಾಗಿದ್ದವು. ಈ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.

**9.** ಭಾರತದಲ್ಲಿ ಬಾಲಾಪರಾಧ ಅಧಿನಿಯಮ, 1986 ರಲ್ಲಿದ್ದ ಲೋಪ ಮತ್ತು ದೋಷಗಳನ್ನು ಮನಗಂಡು ಬಾಲಾಪರಾಧ ನ್ಯಾಯ (ಮಕ್ಕಳ ಕ್ಷೇಮಪಾಲನೆ ಮತ್ತು ರಕ್ಷಣೆ) ಅಧಿನಿಯಮ 2000 ಎಂಬ ಹೊಸ ಅಧಿನಿಯಮವನ್ನು ಜಾರಿಗೆ ತರಲಾಯಿತು. ಈ ಹೊಸ ಅಧಿನಿಯಮದ ಧ್ಯೇಯಗಳನ್ನು ನಿರೂಪಿಸಿ ಮತ್ತು ಹಳೆ ಹಾಗೂ ಹೊಸ ಅಧಿನಿಯಮಗಳಲ್ಲಿ ಬಾಲಾಪರಾಧಿಯ ವಯಸ್ಸಿಗೆ ಸಂಬಂಧಿಸಿದಂತೆ ಕಾನೂನಿನಲ್ಲಿರುವ ಉಪಬಂಧಗಳೇನು ಎಂಬುದನ್ನು ತಿಳಿಯಪಡಿಸಿ.

**10.** ಸುಧಾರಣ ಸಂಸ್ಥೆಗಳಲ್ಲಿ ನಿವಾಸಿತರಾಗಿರುವವರಿಗೆ ಪೆರೋಲ್ ನೀಡುವುದಕ್ಕೆ ಅವರ "ಅರ್ಹತೆ ಮತ್ತು ಸೂಕ್ತತೆ" ಎಂಬ ಪದಗಳ ಅರ್ಥವೇನು ?

**11.** ಒಂದು ಸುಧಾರಣಾ ಸಂಸ್ಥೆಯಲ್ಲಿ ನಿವಾಸಿತರಾಗಿರುವವರನ್ನು "ಕಕ್ಷಿ ಕೇಂದ್ರಿತತಿದ್ದುಪಡಿ" (ಚಿಕಿತ್ಸೆ) ಮಾಡುವ ಸಂದರ್ಭದಲ್ಲಿ 'ಸ್ವಂತದ ಪ್ರಕಟನೆ'ಯ ಪ್ರಾಮುಖ್ಯತೆ ಕುರಿತು ಚರ್ಚಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** What are the objectives of (i) Prison Labour and (ii) Prison Education ? How is the educational programme structured in Indian Correctional Institutions ?

**13.** Discuss the importance of Manias in relation to crime and delinquency.

**14.** What are the advantages of Probation Services against incarceration ?

**15.** What are the principles to be observed while sketching a scene of crime ? Enumerate the uses of crime-scene sketches in investigation of crimes.

**16.** 'F.I.R. acts as the basis for police investigation of a crime'. What are the essential contents in a F.I.R. and how are they recorded ? What is the evidentiary value of F.I.Rs in criminal cases ?

**17.** What are the subtypes of mental retardation as given by Diagnostic and Statistical Manual of Mental Disorders of American Psychiatric Association ? Explain and bring out the relationship between mental retardation and crime.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** (i) ಬಂಧೀಖಾನೆಯ ಪರಿಶ್ರಮ ಮತ್ತು (ii) ಬಂಧೀಖಾನೆಯ ಶಿಕ್ಷಣಗಳ ಧ್ಯೇಯೋದ್ದೇಶಗಳೇನು ? ಭಾರತದ ಸುಧಾರಣಾ ಸಂಸ್ಥೆಗಳಲ್ಲಿನ ಶಿಕ್ಷಣ ಕ್ರಮವನ್ನು ಹೇಗೆ ರಚಿಸಲಾಗಿದೆ ?

**13.** ಅಪರಾಧ ಮತ್ತು ಅಕೃತ್ಯಗಳಿಗೆ ಸಂಬಂಧಿಸಿದಂತೆ ಹುಚ್ಚು ಆವೇಶ (Manias) ದ ಪ್ರಾಮುಖ್ಯತೆಯನ್ನು ಕುರಿತು ಚರ್ಚಿಸಿ.

**14.** ಸೆರೆಮನೆಯಲ್ಲಿಡುವುದಕ್ಕೆ ಪ್ರತಿಯಾಗಿ ಪ್ರೊಬೆಶನ್ ಸೇವೆಗಳಲ್ಲಿರುವ ಅನುಕೂಲತೆಗಳೇನು ?

**15.** ಅಪರಾಧ ನಡೆದ ಸ್ಥಳದ ಚಿತ್ರ ರಚಿಸುವಾಗ ಗಮನಿಸಬೇಕಾದ ತತ್ವಗಳೇನು ? ಅಪರಾಧಗಳ ತನಿಖೆಯಲ್ಲಿ ಅಪರಾಧ ಸ್ಥಳಚಿತ್ರಗಳ ಉಪಯೋಗವನ್ನು ವಿವರಿಸಿ.

**16.** 'ಒಂದು ಅಪರಾಧವನ್ನು ಕುರಿತು ಪೋಲೀಸ್ ತನಿಖೆ ನಡೆಸುವುದಕ್ಕೆ ಪ್ರಥಮಮಾಹಿತಿವರದಿಯು (F.I.R.) ಮೂಲಾಧಾರದಂತೆ ಬಳಕೆಯಾಗುತ್ತದೆ'. F.I.R. ನಲ್ಲಿ ಅವಶ್ಯಕವಾಗಿ ಇರಲೇ ಬೇಕಾದ ಅಂಶಗಳು ಯಾವುವು ಮತ್ತು ಅವುಗಳನ್ನು ಹೇಗೆ ದಾಖಲಿಸಿಕೊಳ್ಳಲಾಗುತ್ತದೆ ? ಕ್ರಿಮಿನಲ್ ಪ್ರಕರಣಗಳಲ್ಲಿ F.I.R. ಗಳಿಗೆ ಯಾವ ರೀತಿಯ ಸಾಕ್ಷ್ಯಾಧಾರ ಮೌಲ್ಯವಿದೆ ?

**17.** ಅಮೆರಿಕನ್ ಸೈಕಿಯಾಟ್ರಿಕ್ ಸಂಘವು ಪ್ರಕಟಿಸಿರುವ Diagnostic and Statistical Manual of Mental Disorders ನಲ್ಲಿ ಕೊಟ್ಟಿರುವ ಪ್ರಕಾರ ಬುದ್ಧಿಮಾಂದ್ಯತೆಯಲ್ಲಿ ಎಷ್ಟು ಉಪವಿಧಗಳಿವೆ ? ಬುದ್ಧಿಮಾಂದ್ಯತೆ ಮತ್ತು ಅಪರಾಧಗಳ ನಡುವಿನ ಸಂಬಂಧವನ್ನು ತಿಳಿಸಿ ಹಾಗೂ ವಿವರಿಸಿ.

[Turn over

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** (a) 'Police interrogation will be successful if and only if the defence mechanisms in the interrogated are made inoperative or inactive.' – Comment.

(b) Bring out the objectives behind "What questions, How questions, Can you/Could you questions and Why questions" during police interrogation.

**19.** What are the scales/criteria to decide normal and abnormal behaviour ? Give illustrations and examples.

**20.** "The mood and temper of the public with regard to the treatment of crime and criminals has been always an unfailing test of the civilization of any country." – Comment.

**21.** What are the powers and duties of police as per the existing laws and rules ? What are your suggestions with regard to police powers/duties for improvement in the present day society ?

**22.** What is Alcoholism ? As alcoholism is developed over a period in an individual, how is terrorism developed over a period in society as it is a process rather than an incident or event ? Discuss.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** (ಎ) "ಪ್ರಶ್ನಿಸಲ್ಪಡುವ ವ್ಯಕ್ತಿಯ ರಕ್ಷಣಾ ಕೌಶಲಗಳು ಕಾರ್ಯಾಚರಣೆಗೆ ಬಾರದಂತೆ ಮತ್ತು ನಿಷ್ಕ್ರಿಯವಾಗುವಂತೆ ಮಾಡಿದರೆ ಮತ್ತು ಹಾಗೆ ಮಾಡಿದಾಗ ಮಾತ್ರವೇ ಪೊಲೀಸರ ಪ್ರಶ್ನಾವಳಿಯು ಯಶಸ್ವಿಯಾಗುತ್ತದೆ" – ಈ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.

(ಬಿ) ಪೊಲೀಸರ ಪ್ರಶ್ನಾವಳಿಯ ಸಂದರ್ಭದಲ್ಲಿ 'ಏನು ಪ್ರಶ್ನೆಗಳು', 'ಹೇಗೆ ಪ್ರಶ್ನೆಗಳು', 'ನಿನಗೆ ಸಾಧ್ಯವೆ/ನೀನು ಮಾಡಬಹುದೆ' ಪ್ರಶ್ನೆಗಳು ಮತ್ತು 'ಯಾಕೆ ಪ್ರಶ್ನೆ'ಗಳ ಹಿಂದಿರುವ ಉದ್ದೇಶಗಳೇನು ಎಂಬುದನ್ನು ನಿರೂಪಿಸಿ.

**19.** ಸಹಜವಾದ ಮತ್ತು ಅಸಹಜವಾದ ನಡವಳಿಕೆಯನ್ನು ನಿರ್ಧರಿಸುವ ಮಾನದಂಡಗಳು ಯಾವುವು ? ಇದಕ್ಕೆ ದೃಷ್ಟಾಂತಗಳನ್ನು ಮತ್ತು ಉದಾಹರಣೆಗಳನ್ನು ಕೊಡಿ.

**20.** "ಅಪರಾಧ ಮತ್ತು ಅಪರಾಧಿಗಳನ್ನು ನಡೆಸಿಕೊಳ್ಳುವ / ವಿಚಾರಿಸಿಕೊಳ್ಳುವ ರೀತಿ ಕುರಿತಂತೆ ಸಾರ್ವಜನಿಕರ ಚಿತ್ತಸ್ಥಿತಿ ಹಾಗೂ ಮನೋಧರ್ಮ ಯಾವ ರೀತಿ ಇರುತ್ತದೋ ಅದು ಆ ದೇಶದ ನಾಗರಿಕತೆಯನ್ನು ತಿಳಿಸುವ, ಎಂದೂ ವಿಫಲವಾಗದ ಪರೀಕ್ಷೆಯಾಗಿದೆ." – ಇದರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

**21.** ಈಗಿರುವ ಕಾನೂನುಗಳು ಮತ್ತು ನಿಯಮಗಳ ಪ್ರಕಾರ, ಪೊಲೀಸರ ಅಧಿಕಾರ ಮತ್ತು ಕರ್ತವ್ಯಗಳೇನು ? ಇಂದಿನ ಸಮಾಜದಲ್ಲಿ ಪೊಲೀಸರ ಕರ್ತವ್ಯ ಹಾಗೂ ಅಧಿಕಾರಗಳಿಗೆ ಸಂಬಂಧಿಸಿದಂತೆ ಸುಧಾರಣೆಯನ್ನುಂಟು ಮಾಡಲು ನಿಮ್ಮ ಸಲಹೆಗಳೇನು ?

**22.** ಮದ್ಯಪಾನ ವ್ಯಸನ ಎಂದರೇನು ? ಒಬ್ಬ ವ್ಯಕ್ತಿಯಲ್ಲಿ ಈ ವ್ಯಸನವು ಕಾಲಾನುಕ್ರಮದಲ್ಲಿ ಬೆಳೆಯುತ್ತ ಹೋಗುವಂತೆಯೇ, ಇದೂ ಒಂದು ಪ್ರಕ್ರಿಯೆಯೇ ಹೊರತು ಕೇವಲ ಘಟನೆಯಾಗಲೀ ಆಕಸ್ಮಿಕ ಸಂಭವವಾಗಲೀ ಅಲ್ಲವಾದ್ದರಿಂದ ಒಂದು ಸಮಾಜದಲ್ಲಿ ಭಯೋತ್ಪಾದನೆಯೂ ಸಹ ಹೇಗೆ ಕಾಲಾನುಕ್ರಮದಲ್ಲಿ ಬೆಳೆಯುತ್ತಾ ಹೋಗುತ್ತದೆ ? ಚರ್ಚಿಸಿ.

# 2010

## ಅಪರಾಧಶಾಸ್ತ್ರ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

**ಸೂಚನೆಗಳು**

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು* ***ಕಡ್ಡಾಯವಾಗಿ*** *ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ* ***ಮೂರು*** *ಪ್ರಶ್ನೆಗಳನ್ನು ಉತ್ತರಿಸಿ.*

***Note :*** *The English version of the instructions is printed on the front cover of this question paper.*

SEAL